ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ ಹಂಪಸಾಗರ,

ಸಂ.ಕಂ.ಪಹಣಿ/ವಿವಾದ/ 61/2015-16

---

ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ

---

| ವಾದಿಗಳು | | ಪ್ರತಿವಾದಿಗಳು |
|---|---|---|
| 1) ಸಂಚಿ॥ ಬಸವರಾಜ<br>2) ಸಂಚಿ॥ ಚಂದ್ರಶೇಖರಗೌಡ<br>3) ಸಂಚಿ ॥ ನಿಂಗನಗೌಡ<br>4) ಸಂಚಿ ॥ ಜಯಣ್ಣ<br>ದಿ॥ ಶಿವಾನಂದಗೌಡ<br>ಗ್ರಾಮ : ಸೊನ್ನ | ತಂದೆ | ಕಂದಾಯ ನಿರೀಕ್ಷಕರು,<br>ಹಂಪಸಾಗರ |

---

ವಿಷಯ : – ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಸೊನ್ನ ಗ್ರಾಮಕ್ಕೆ ಸೇರಿದ ಜಮೀನುಗಳ

| ಸ.ನಂ. | ವಿಸ್ತೀರ್ಣ |
|---|---|
| 1) 35ಬಿ/7 | 00-08 |
| 2) 115ಎ/3 | 04-01 |
| 3) 129ಬಿ/2 | 02-69 |
| 4) 133/ಬಿ | 04-23 |
| 5) 220/1 | 02-00 |

ಜಮೀನುಗಳು ಪವತಿ ಹಾಗೂ ಪಾಲುವಿಭಾಗದ ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು – ವಿಚಾರಣೆ.

---

**ಪೀಠಿಕೆ :-**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಸೊನ್ನ ಗ್ರಾಮಕ್ಕೆ ಸೇರಿದ ಜಮೀನುಗಳು 35ಬಿ/7 ವಿಸ್ತೀರ್ಣ 00-08, 115ಎ/3 ವಿಸ್ತೀರ್ಣ 04-01, 129ಬಿ/2 ವಿಸ್ತೀರ್ಣ 02-69, 133/ಬಿ ವಿಸ್ತೀರ್ಣ 04-23 ಹಾಗೂ 220/1 ವಿಸ್ತೀರ್ಣ 02-00 ಎಕರೆ ಜಮೀನುಗಳನ್ನು ವಾದಿಗಳು ಪವತಿ ಹಾಗೂ ಪಾಲು ವಿಭಾಗದ ಪ್ರಕಾರ ಹಕ್ಕು ಬದಲಾವಣೆ ಹೊಂದಲು ನಿಗದಿತ ನಮೂನೆಯೊಂದಿಗೆ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಅರ್ಜಿಯು ಭೂಮಿಕೇಂದ್ರದಲ್ಲಿ ದಾಖಲಾಗಿ ವಹಿವಾಟು ಸಂಖ್ಯೆ 79 ಹಾಗೂ ಹಕ್ಕು ಬದಲಾವಣೆ ಸಂಖ್ಯೆ ಹೆಚ್-31/2015-16 ರಂತೆ ಹಕ್ಕು ಬದಲಾವಣೆ ಕ್ರಮಕ್ಕಾಗಿ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿದೆ. ಸದರಿ ನೋಟೀಸುಗಳನ್ನು ಗ್ರಾಮಲೆಕ್ಕಾಧಿಕಾರಿ ಸೊನ್ನ ಇವರ ದ್ವಾರ

ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ಜಾರಿ ಮಾಡಲಾಗಿ ವಾದಿಗಳು 1 ರಿಂದ 3 ರವರೆಗಿನ ಅರ್ಜಿದಾರರು ನೋಟೀಸು ಪಡೆದು ಸಹಿ ಮಾಡಿರುತ್ತಾರೆ. ಆದರೆ 4ನೇ ವಾದಿ ಶ್ರೀ ಎಸ್.ಜಯಣ್ಣ ಇವರು ನೋಟೀಸು ಪಡೆಯದೇ ನಿರಾಕರಿಸುತ್ತ ಸಹಿ ಮಾಡಿರುವುದಿಲ್ಲ. ಈ ವಿವರವನ್ನು ಗ್ರಾಮ ಲೆಕ್ಕಾಧಿಕಾರಿ ಸೊನ್ನ ಇವರು ವರದಿ ಮಾಡಿಕೊಂಡಿದ್ದು ಈ ವರದಿಯ ಆಧಾರದ ಮೇಲೆ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಈ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 05-04-2016 ರಿಂದ ದಿನಾಂಕ: 05-05-2016 ರವರೆಗೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿಗಳು ನಾಲ್ಕು ಜನ ಹಾಜರಾಗಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಲಾಗಿ ವಾದಿಗಳು ನಾಲ್ಕು ಜನ ಅಣ್ಣ ತಮ್ಮಂದಿರುವುದು ಹಾಜರುಪಡಿಸಿದ ವಂಶವೃಕ್ಷದಿಂದ ಕಂಡು ಬರುತ್ತದೆ. ಮತ್ತು ಈ ನಾಲ್ಕು ಜನರು ಅಣ್ಣ, ತಮ್ಮಂದಿರು ದಿನಾಂಕ: 23-03-2010 ರಂದು ಪಾಲು ವಿಭಾಗ ಹೊಂದುತ್ತಾ ಪ್ರತ್ಯೇಕ ಕುಟುಂಬದಲ್ಲಿರುವುದಾಗಿ ತಿಳಿಸುತ್ತಾ, ಪಾಲುವಿಭಾಗದ ಪತ್ರ ಹಾಜರು ಪಡಿಸಿರುತ್ತಾರೆ. ಪಾಲು ವಿಭಾಗದ ಪ್ರಕಾರ 4ನೇ ವಾದಿ ಶ್ರೀ ಎಸ್.ಜಯಣ್ಣ ತಂದೆ ದಿ॥ ಎಸ್ ಶಿವಾನಂದಗೌಡ ಇವರು ತಮ್ಮ ಹಿಸ್ಸೆಕ್ಕೆ ಬಂದಂಥ ಜಮೀನನ್ನು ತನ್ನ ಅಣ್ಣ 1ನೇ ಬಸವರಾಜ ಇವರಿಗೆ ಬಿಟ್ಟುಕೊಡುತ್ತಾ ಇದರ ಕಿಮ್ಮತ್ತು ರೂ. 2,69,000/- ರೂ. ಪಡೆದುಕೊಂಡಿರುವುದಾಗಿ ಹಾಜರುಪಡಿಸಿದ ಪಾಲುವಿಭಾಗದ ಪ್ರಕಾರ ಕಂಡು ಬರುತ್ತದೆ. ಹಾಗೂ ವಾದಿಗಳು 1 ರಿಂದ 3 ರವರು ಪ್ರಮಾಣಪತ್ರ ಹಾಜರು ಪಡಿಸುತ್ತಾ ಈ ಮೇಲ್ಕಂಡ ಜಮೀನುಗಳ ಹಾಲೀ ಲೆಕ್ಕದಾಖಲು ನಮ್ಮ ತಾಯಿ ಶ್ರೀಮತಿ ದಿ॥ ಎಸ್.ಚಂದ್ರಮ್ಮ ಗಂಡ ಶಿವಾನಂದಗೌಡ ಅಂತ ಇದ್ದು ಇವರು ದಿನಾಂಕ: 20-04-2015 ರಂದು ಮರಣ ಹೊಂದಿದ್ದು ಪವತಿ ವಾರಸು ಹಾಗೂ ಪಾಲುವಿಭಾಗದ ಪ್ರಕಾರ ಹಕ್ಕು ಬದಲಾವಣೆ ಮಾಡಿಕೊಡಲು ನ್ಯಾಯಾಲಯಕ್ಕೆ ಪ್ರಮಾಣಪತ್ರ ಹಾಜರುಪಡಿಸಿ ಹೇಳಿಕೆ ನೀಡಿರುತ್ತಾರೆ. ಹಾಗೂ ಪೂರಕವಾಗಿ ವಂಶವೃಕ್ಷ, ಮರಣಪ್ರಮಾಣಪತ್ರ ಹಾಗೂ ಪಾಲುವಿಭಾಗಪತ್ರ ಹಾಗೂ ಇತರೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಹಾಗೂ ಪ್ರತಿವಾದಿಗಳು ನಮೂನೆ 12 ಹಾಗೂ ನೋಟೀಸು 21ಕ್ಕೆ ಸಹಿ ಮಾಡಿಲ್ಲವೆಂದು ವರದಿ ಮಾಡಿರುವುರಾದರೂ 4ನೇ ಎಸ್.ಜಯಣ್ಣ ಇವರು ವಿಚಾರಣೆಯಲ್ಲಿ ಹಾಜರಿದ್ದು ಯಾವುದೇ

ತಕರಾರಾಗಲೀ ಅಥವಾ ಹೇಳಿಕೆಯಾಗಲೀ ನೀಡಿರುವುದಿಲ್ಲ. ಲಭ್ಯವಿರುವ ದಾಖಲೆಗಳು ಹಾಗೂ ವಾಸ್ತವಾಂಶ ಹಿನ್ನೆಲೆಯಲ್ಲಿ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಸೊನ್ನ ಗ್ರಾಮಕ್ಕೆ ಸೇರಿದ ಜಮೀನುಗಳು

| ಸ.ನಂ. | ವಿಸ್ತೀರ್ಣ | |
|---|---|---|
| 1) 35ಬಿ/7 | 00-08 | |
| 2) 115ಎ/3 | 04-01 | ಇತರೆ ಪಟ್ಟಾದಾರರ ಜೊತೆಗೆ ಜಂಟಿಯಾಗಿ |
| 3) 129ಬಿ/2 | 02-69 | |
| 4) 133/ಬಿ | 04-23 | ಇತರೆ ಪಟ್ಟಾದಾರರ ಜೊತೆಗೆ ಜಂಟಿ |
| 5) 220/1 | 02-00 | |

ಸ.ನಂ. 115ಎ/3 ಹಾಗೂ 133/ಬಿ ರಲ್ಲಿನ ಇತರೆ ಪಟ್ಟಾದಾರರ ಜೊತೆಯಲ್ಲಿ ವಾರಸು ಹಾಗೂ ಪಾಲುವಿಭಾಘದ ಪ್ರಕಾರ 1) ಸಂಚಿ ॥ ಬಸವರಾಜ 2) ಸಂಚಿ॥ಚಂದ್ರಶೇಖರಗೌಡ 3) ಸಂಚಿ॥ನಿಂಗನಗೌಡ ತಂದೆ ದಿ॥ ಎಸ್.ಶಿವಾನಂದಗೌಡ ಇವರ ಮೂರು ಜನರ ಹೆಸರಿನಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಮಂಜೂರು ಹಾಗೂ ಜಂಟೀ ಹಕ್ಕುದಾರರು ತಾವು ಹೊಂದಿರುವ ಪಾಲುವಿಭಾಗದ ಪ್ರಕಾರ 11-ಇ ನಕ್ಷೆ ಹೊಂದಿ ವಿಭಜನೆ ಹೊಂದಲು ನಿರ್ದೇಶಿಸುತ್ತಾ ಮೂರು ಜನರ ಹೆಸರಿನಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 05-05-2016 ರಂದು ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :-

1) ವಾದಿ ಮತ್ತು ಪ್ರತಿವಾದಿಗಳಿಗೆ ನ್ಯಾಯವಾದಿಗಳ ಮುಖೇನ
2) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ ಮುಂದಿನ ಕ್ರಮಕ್ಕಾಗಿ
3) ಹೆಚ್ಚುವರಿ ಪ್ರತಿ ಕಡತಕ್ಕೆ